# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 424

ಸದಸ್ಯರ ಹೆಸರು : ಡಾ. ಉಮಾಶ್ರೀ (ನಾಮನಿರ್ದೇಶನ ಹೊಂದಿದವರು)

ಉತ್ತರಿಸಬೇಕಾದ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸಬೇಕಾದ ದಿನಾಂಕ : 13-08-2025

| | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿ ವಿದೇಶದಿಂದ ಆಮದು ಮಾಡಿಕೊಂಡ ಐಷಾರಾಮಿ ಕಾರುಗಳನ್ನು ಅಕ್ರಮವಾಗಿ ನೋಂದಣಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಇದುವರೆಗೂ ಎಷ್ಟು ಪ್ರಕರಣಗಳು ದಾಖಲಾಗಿದೆ: ಈ ಬಗ್ಗೆ ಸರ್ಕಾರ ಯಾವ ರೀತಿ ಕ್ರಮ ಕೈಗೊಂಡಿದೆ: | ವಿದೇಶದಿಂದ ಆಮದು ಮಾಡಿಕೊಂಡ ಐಷಾರಾಮಿ ಕಾರೊಂದನ್ನು ಪ್ರಾದೇಶಿಕ ಸಾರಿಗೆ ಕಛೇರಿ, ಉಡುಪಿ ಇಲ್ಲಿ ಅಕ್ರಮವಾಗಿ ನೋಂದಣಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ.<br>ಈವರೆಗೂ ಇದೊಂದು ಪ್ರಕರಣ ದಾಖಲಾಗಿದ್ದು, ಈ ಬಗ್ಗೆ ಸಂಬಂಧಪಟ್ಟ ಕಛೇರಿ ಅಧೀಕ್ಷಕರನ್ನು ವಿಚಾರಣೆ ಬಾಕಿ ಇಟ್ಟು ಸೇವೆಯಿಂದ ಅಮಾನತ್ತುಗೊಳಿಸಲಾಗಿದೆ. |
| ಆ. | ಈ ರೀತಿ ಅಕ್ರಮವಾಗಿ ನೋಂದಣಿ ಮಾಡಿಸಿರುವ ಅಧಿಕಾರಿಗಳ ಮೇಲೆ ಸರ್ಕಾರ ಕ್ರಮ ಕೈಗೊಂಡಿದೆಯೇ: ಹಾಗಿದ್ದಲ್ಲಿ, ಎಷ್ಟು ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆ: | ಉಡುಪಿ ಪ್ರಾದೇಶಿಕ ಸಾರಿಗೆ ಕಛೇರಿಯಲ್ಲಿನ ಪ್ರಕರಣದ ಕುರಿತು ಕಛೇರಿ ಅಧೀಕ್ಷಕರನ್ನು ವಿಚಾರಣೆ ಬಾಕಿ ಇಟ್ಟು ಸೇವೆಯಿಂದ ಅಮಾನತ್ತುಗೊಳಿಸಲಾಗಿದೆ.<br>ಇದೇ ಪ್ರಕರಣದಲ್ಲಿ, ವಾಹನದ ತಾತ್ಕಾಲಿಕ ನೋಂದಣಿ ವಿವರಗಳನ್ನು ಮಾರ್ಪಾಡು ಮಾಡಿ ಅಕ್ರಮವಾಗಿ ಅಧಿಕೃತಗೊಳಿಸಿದ ಮೇರೆಗೆ, ಮಂಗಳೂರು ಪ್ರಾದೇಶಿಕ ಸಾರಿಗೆ ಕಛೇರಿಯ ಕೇಂದ್ರ ಸ್ಥಾನೀಯ ಸಹಾಯಕರು, ಅಧೀಕ್ಷಕರು ಮತ್ತು ವಿಷಯ ನಿರ್ವಾಹಕರನ್ನು ಸಹ ವಿಚಾರಣೆ ಬಾಕಿ ಇಟ್ಟು ಸೇವೆಯಿಂದ ಅಮಾನತ್ತುಗೊಳಿಸಲಾಗಿದೆ.<br>ಅಲ್ಲದೆ, ಈ ಪ್ರಕರಣದಲ್ಲಿ ಲೋಪವೆಸಗಿದ ಆಯಾ ಕಛೇರಿ ಮುಖ್ಯಸ್ಥರ ಮೇಲೆ ಶಿಸ್ತು ಕ್ರಮ ಕೈಗೊಳ್ಳುವ ಬಗ್ಗೆ ವಿವರವಾದ ದೋಷಾರೋಪಣಾ ಪಟ್ಟಿಯನ್ನು ತಯಾರಿಸಿ ಸಲ್ಲಿಸುವಂತೆ ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ ಇವರನ್ನು ಕೋರಲಾಗಿರುತ್ತದೆ. |
| ಇ. | ಈ ರೀತಿಯ ವಾಹನಗಳನ್ನು ನೋಂದಣಿ ಮಾಡಲು ಕೇಂದ್ರ ಕಛೇರಿಯ ಅನುಮತಿ ಪಡೆಯಲಾಗಿದೆಯೇ? | ಈ ಪ್ರಕರಣದಲ್ಲಿ, ಮಂಗಳೂರು ಪ್ರಾದೇಶಿಕ ಸಾರಿಗೆ ಅಧಿಕಾರಿಯವರ ಪತ್ರ ದಿನಾಂಕ:21-12-2024 ರಲ್ಲಿ ತಾತ್ಕಾಲಿಕ ನೋಂದಣಿ ವಿವರಗಳನ್ನು ನಮೂದಿಸಿ, ವಾಹನ ವನ್ನು ನೋಂದಣಿ ಮಾಡಲು ಅನುಮತಿ ಕೋರಿದ್ದರ ಮೇರೆಗೆ, ವಾಹನವು ಭಾರತ್ ಸ್ಟೇಜ್-4 ಮಾದರಿಯದಾಗಿದ್ದು, ಭಾರತ್ ಸ್ಟೇಜ್-4 ವಾಹನಗಳ ನೋಂದಣಿ ಕುರಿತು ಮಾನ್ಯ ಸರ್ವೋಚ್ಚ ನ್ಯಾಯಾಲಯವು Writ Petition No.13029/1985 (M.C. Mehta V/s Union of India & others) ಪ್ರಕರಣದಲ್ಲಿ ನೀಡಿದ ನಿರ್ದೇಶನದ ಮೇರೆಗೆ, ವಾಹನವು ದಿನಾಂಕ:31-03-2020 ರ ಒಳಗಾಗಿ ಮಾರಾಟವಾಗಿ, ಅದರ ವಿವರಗಳು ಇ-ವಾಹನ್ ಪೋರ್ಟಲ್‌ನಲ್ಲಿ ನಮೂದಿತವಾಗಿರುವುದನ್ನು ಪರಿಶೀಲಿಸಿ, ದೃಢಪಡಿಸಿಕೊಂಡು ನೋಂದಣಿ ಮಾಡಲು ತಿಳಿಸಲಾಗಿರುತ್ತದೆ. |

ಟಿಡಿ 53 ಟಿಡಿಕ್ಯೂ 2025

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು